Panchayat Raj Institutions

119. Sri B. G. BANAKAR (Hirekerur);—

Will the Minister for Community Development and Social Welfare be pleased to state :—

(*a*) whether it has come to the notice of the Government that the Panchayat Raj Institutions in the State are not functioning satisfactorily ;

(*b*) if so, the measures the Government intends to take to improve the working of the Panchayat Raj Institutions in the State ;

(*c*) whether there is any proposal before Government to amend the Mysore Village Panchayat and Local Boards Act, 1959 in accordance with the recommendations of the Kondajji Basappa Committee ?

Sri M. MALLIKARJUNASWAMY (Minister for Community Development and Social Welfare).—

(*a*) No.

(*b*) Does not arise.

(*c*) No. It is proposed to watch the progress of the Panchayat Raj Institutions under the present set-up for some more time and then to take up exhaustive legislation to set right the loopholes. At that time the recommendations of the Kondajji Basappa Committee will be taken up for consideration.

ಶ್ರೀ ಬಿ. ಜಿ. ಬಣಕಾರ.—1-4-1972 ರಲ್ಲಿ ಗ್ರಾಮ ಪಂಚಾಯಿತಿಗಳಿಂದ ಬರಬೇಕಾದ ಬಾಕಿ 4 ಕೋಟಿ 47 ಲಕ್ಷ ಚಿಲ್ಲರೆ ರೂಪಾಯಿ ಇತ್ತು. ಆ ಪಂಚಾಯ್ತಿಗಳಿಗೆ ಖಾಯಂ ಸೆಕ್ರೆಟರಿ ಮತ್ತು ಎಕ್ಸ್‌ಟೆನ್ಷನ್ ಆಫೀಸರೋ ಸೆಕ್ರೆಟರಿ—ತರಾಟೆ ಮುಂತಾದವರಿದ್ದರೂ ಸಹ ಇಷ್ಟು ಹಣ ವಸೂಲು ಮಾಡದಿರುವುದು ನೋಡಿದರೆ ಇದು ತೃಪ್ತಿಕರವಾಗಿದೆ ಎಂದು ಹೇಳಲು ಸಾಧ್ಯವೇ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ಫಿಸಿಕಲ್ ಬ್ಯಾಕ್‌ವರ್ಡ್‌ನೆಸ್ ಇರುವುದರಿಂದ ಸಮರ್ಪಕವಾಗಿಲ್ಲ ಎಂಬುದು ಅನಿವಾರ್ಯ.

ಶ್ರೀ ಬಿ. ಜಿ. ಬಣಕಾರ್.—ಈ ಪಂಚಾಯಿತಿಗಳಿಗೆ ಸಂಬಂಧಪಟ್ಟ ಎಷ್ಟು ಹಳ್ಳಿಗಳಲ್ಲಿ ಬೀದಿ ದೀಪ ಒದಗಿಸಲಾಗಿದೆ ? ಒದಗಿಸಿರುವ ಎಷ್ಟು ಹಳ್ಳಿಗಳಲ್ಲಿ ಹಣ ಕಟ್ಟಿಲ್ಲವೆಂದು ಎಂ. ಎಸ್. ಇ. ಬಿ. ನವರು ಫ್ಯೂಸ್ ಕಿತ್ತುಕೊಂಡು ಹೋಗಿದ್ದಾರೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗ 10—15 ವರ್ಷಗಳಿಂದ ಪಂಚಾಯತಿ ರಾಜ್ಯ ಸಂಸ್ಥೆಗಳು ಕ್ಷೇಗೆ ಕೆಲಸ ಮಾಡಿವೆ ಎಂದು ನೋಡಬೇಕು. ಪಟ್ಟಭದ್ರ ವ್ಯಕ್ತಿಗಳು, ಬಂಡವಾಳ ಶಾಹಿಗಳು ಚುನಾವಣೆಯಲ್ಲಿ ಬರುವ ನೀತಿ ತಾಲ್ಲೂಕುಬೋರ್ಡು ಮತ್ತು ಪಂಚಾಯತಿಗಳಲ್ಲಿ ಇದೆ.

ಅಧ್ಯಕ್ಷರು.—ಭಾಷಣ ಮಾಡುವುದು ಅಲ್ಲ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—It is a question. It is not a Bhashana.

MADAM SPEAKER.—How many minutes will you take for a question here afterwards ?

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಬಂಡವಾಳ ಶಾಹಿಗಳು ಲಂಚ ಕೊಟ್ಟು ಚುನಾವಣೆ ಮಾಡಿನತಕ್ಕ ಒಂದು ರೀತಿಯಲ್ಲಿ ಈಗ ಇರತಕ್ಕ ಶಾಸನ ಇದೆ. ಆದ್ದರಿಂದ ಸಾರ್ವತ್ರಿಕವಾಗಿ ಓಟುದಾರರು ಚುನಾವಣೆ ಮಾಡುವ ರೀತಿಯಲ್ಲಿ ಸಮಗ್ರವಾಗಿ ಶಾಸನವನ್ನು ಪರಿಶೀಲನೆ ಮಾಡುವಾಗ ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಏನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ, ಇದು ನನ್ಮಾನ್ಯ ಸದಸ್ಯರ ಅಭಿಪ್ರಾಯ ಎಂದು, ಎರಡನೆಯ ಪ್ರಶ್ನೆಗೆ ಉತ್ತರವಾಗಿ, ಚುನಾವಣೆಯನ್ನು ಯಾವ ತರಹ ಮಾಡಬೇಕು, ಹೇಗೆ ಮಾಡಬೇಕು ಎನ್ನತಕ್ಕಂಥಾದ್ದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಗ್ರಾಮ ಲೆಕ್ಕಾಧಿಕಾರಿಗಳು ಪಂಚಾಯತಿಯ ಕೆಲಸವನ್ನು ನೋಡಿಕೊಳ್ಳುತ್ತಿದ್ದಾರೆ. ಇದು ಪಂಚಾಯತಿ ಅಧ್ಯಕ್ಷರ ಹತೋಟಿಯಲ್ಲಿ ಇಲ್ಲದೇ ಇರುವುದರಿಂದ ಪಂಚಾಯತಿಯ ಕೆಲಸಗಳು ಹಿಂದುಳಿದಿರುವುದಕ್ಕೆ ಕಾರಣವಾಗಿದೆ. ಇದನ್ನು ಸರಿಪಡಿಸುವ ದೃಷ್ಟಿಯಿಂದ ಇವರನ್ನು ಪಂಚಾಯತಿಯ ಅಧ್ಯಕ್ಷರ ಕಂಟ್ರೋಲ್‌ನಲ್ಲಿ ಇರುವ ರೀತಿಯಲ್ಲಿ ಏನಾದರೂ ಕಾನೂನನ್ನು ಬದಲಾವಣೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಣನೆಗೆ ತೆಗೆದು ಕೊಳ್ಳುತ್ತೇವೆ.

Sri D. B. KALMANKAR.—Supplementary to (c) : What are the loopholes that the Government has already noticed in the functioning of these institutions during the last 10–12 years ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಒಂದಲ್ಲ, ಎರಡಲ್ಲ, ಇದರಲ್ಲಿ ಅನೇಕ ಲೋಪ ದೋಷಗಳು ಇವೆ. ಪಂಚಾಯತಿಗಳಿಗೆ ಹೆಚ್ಚಿಗೆ ಅಧಿಕಾರವನ್ನು ಕಾನೂನಿನಲ್ಲಿ ಕೊಡತಕ್ಕದ್ದು ಹಾಗೂ ಪ್ರತ್ಯೇಕವಾಗಿ 4,46,00,000 ರೂಪಾಯಿ ಕಂದಾಯದ ಬಾಕಿ ಉಳಿದು ಹೋಗಿರಬೇಕಾದರೆ, ವಸೂಲ ಕ್ರಮ ಸರಿಯಾಗಿ ನಡೆಯುತ್ತಿಲ್ಲ. ಇದರ ಜೊತೆಗೆ ಡಿವಿಷನರ್ ಕಮಿಷನರ್ ಅವರು ಮತ್ತು ಸ್ಟೇಟ್‌ಮೆಟ್ಟದ ಸಮ್ಮೇಳನದಲ್ಲಿ ಕೂಡ ಅನೇಕ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಅವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ನೂಕ್ಷವಾದಂಥ ಕಾಂಪ್ರಹೆನ್ಸೀವ್ ರೆಜಿಸ್ಲೇಷನ್ ತರುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಪಂಚಾಯತಿಗಳು ಎಲ್ಲವೂ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರಿ ಒಪ್ಪಿಕೊಳ್ಳೋಣ, ಅವು ಇನ್ನೂ ಉತ್ತಮವಾಗಿ ಕೆಲಸ ಮಾಡಬೇಕಾಗುತ್ತದೆ. ಅಲ್ಲಿ ಏನು ಕೊರತೆ ಆಗಿದೆ ಎಂದರೆ, ಡ್ಯೂಯರ್ ಕಂಟ್ರೋಲ್ ಸೆಕ್ರೆಟರಿಗಳ ಮೇರೆ ಇದೆ. ಪಂಚಾಯತಿಯವರದು ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟನವರದು, ಈ ಇಬ್ಬರ ಸಹಾಯದಿಂದ ಸೆಕ್ರಟರಿಗಳು ಕೆಲಸ ಮಾಡಬೇಕಾಗಿದೆ. ಈ ಒಂದು ಕಾರಣದಿಂದ ಪಂಚಾಯತಿಯ ಕೆಲಸ ಕಾರ್ಯಗಳು ಕುಂಠಿತವಾಗಿ ಅನೇಕ ಲೋಪದೋಷಗಳಿಂದ ಕೂಡಿ ಸರಿಯಾದ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲ. ಇವರನ್ನು ಒಬ್ಬರ ಅಧೀನದಲ್ಲಿರುವಂತೆ ಮಾಡಿ, ನೇರವಾಗಿ ಸೆಕ್ರಟರಿಯನ್ನು ನೇಮಿಸತಕ್ಕ ವ್ಯವಸ್ಥೆಯನ್ನು ಅದಷ್ಟು ಬೇಗ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಣನೆಗೆ ತೆಗೆದು ಕೊಳ್ಳುತ್ತೇವೆ.

ಶ್ರೀ ಕೆ.ಎನ್. ವೀರಪ್ಪಗೌಡ.—ಈಗ ಇರತಕ್ಕ ಕಾನೂನು ಪ್ರಕಾರ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳು ಮಾಡತಕ್ಕಂಥ ಕಾರ್ಯಗಳೆಲ್ಲವನ್ನು ಸರಿಯಾಗಿ ಮಾಡುತ್ತಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ಸೆಕ್ರೆಟರಿಗಳ ಮೇರೆ ಅಧಿಕಾರಿಗಳ ಸೂಪರ್‌ವಿಷನ್‌ಗೆ ಸರಿಯಾದ ವ್ಯವಸ್ಥೆ ಇಲ್ಲದೆ ಇರುವುದರಿಂದ ಕಂದಾಯ ವಗೈರಿ ಬಾಕಿ ಉಳಿದಿದೆಯೆಂದು ತಮ್ಮ ನೋಟೀಸ್‌ಗೆ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದೂ ಸ್ವಲ್ಪಮಟ್ಟಿಗೆ ಕಾರಣ ಇರಬಹುದು.

ಶ್ರೀ ಎ.ಎಂ. ಘಾಡಿ.—ಕಾರವಾರದ ಪಂಚಾಯತಿಯಲ್ಲಿ ದೀಪದ ಬಿಲ್ ಕಟ್ಟುವುದಕ್ಕೆ ಸಾಧ್ಯ ವಿಲ್ಲ, ಅಷ್ಟೂ ದೀಪಗಳು ಬಂದೆ ಆಗಿವೆ, ಪಂಚಾಯತಿಗಳ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಇಂಥ ಪಂಚಾಯತಿಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ, ಪಂಚಾಯತಿಯಲ್ಲಿ ಬರಬೇಕಾದಂಥ ಟ್ಯಾಕ್ಸ್‌ಅನ್ನು ವಸೂಲಿ ಮಾಡಿದರೆ, ದೀಪಕ್ಕೆ ಅಗತಕ್ಕ ಹಣವನ್ನು ಕಟ್ಟುವುದಕ್ಕೆ ಸಾಧ್ಯವಿದೆ. ಅದರೆ ಅವರು ಅದನ್ನು ಮಾಡುತ್ತಾ ಇಲ್ಲ.

ಶ್ರಿ ಎಂ. ಬಿ. ರಾಮಸ್ವಾಮಿ.—ಗ್ರಾಮ ಪಂಚಾಯತಿಯ ಅಧ್ಯಕ್ಷರು, ಕಂದಾಯ ವಸೂರಾ ಗಿರುವುದನ್ನು ಕಟ್ಟಿದೆ, ಸೆಕ್ರೆಟರಿಗಳು 20-30 ಸಾವಿರ ರೂಪಾಯಿ ತಿಂದಿದ್ದನ್ನು ಸರ್ಕಾರಕ್ಕೆ ಮನವಿಮಾಡಿಕೊಂಡರೂ ಸರ್ಕಾರ ಅವರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ತಮ್ಮ ಕಾಲದಲ್ಲಿ ಯಾದರೂ, ಇಂಥ ಕೇಸುಗಳನ್ನು ತಮ್ಮ ಗಮನಕ್ಕೆ ತಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕಾನೂನಿನ ಅಡಿಯಲ್ಲಿ ಏನೇನು ಕ್ರಮ ತೆಗೆದುಕೊಳ್ಳ ಬೇಕೋ ಅದೆಲ್ಲವನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಎ. ಪಾಟೀಲ್.—ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳ ವೇಳೆ ಮುಗಿದಿದೆ, ಅವುಗಳಿಗೆ ಎಲೆಕ್ಷೆನ್ ಮಾಡುತ್ತೀರಾ ಅಥವಾ ಮುಂದುವರಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಅದನ್ನು ಮುಂದುವರಿಸಿದ್ದೇವೆ.

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿರುವ ಅನೇಕ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಸಿಬ್ಬಂದಿಗೆ ಕೊಡಲಿಕ್ಕೆ ರೊಕ್ಕ ಇಲ್ಲ, ಎಲೆಕ್ಟ್ರಿಸಿಟಿ ಚಾರ್ಜಸ್ ಕಟ್ಟಲಿಕ್ಕೆ ರೊಕ್ಕ ಇಲ್ಲ, ಕೋಟ್ಯಾಂತರ ರೂಪಾಯಿ ಬರತಕ್ಕದ್ದು ಇದೆ, ಕಾರ್ಯದರ್ಶಿಗಳು, ತಲಾಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಪಂಚಾಯತಿಗಳು ಪ್ರಗತಿ ಪರವಾಗಿ ಕೆಲಸ ಮಾಡಲಿಕ್ಕೆ ಅತಿ ದಕ್ಷತೆಯಿಂದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕ್ರಮ ತೆಗೆದುಕೊಳ್ಳುತ್ತೇವೆ.

MATERNITY HOME AT SAIDAPUR AND HEALTH CENTRE AT GAJARKOT

135. **Sri MALLIKARJUNA** (Gurmitkal).—

Will the Minister for Health be pleased to state :—

(*a*) whether the Government has received any representations from Saidapur people for sanctioning a Maternity Home at Saidapur and Health Centre at Gajarkot ;

(*b*) if so, the action taken by the Government in this regard ;

(*c*) the criteria fixed for the sanction of Health Centre and Maternity Homes in the State ?

Sri H. SIDDAVEERAPPA (Minister for Health).—

(*a*) Yes.